

'ಓಹ್, ಶಿಟ್!...' ನಾನು ತಲೆಯ ಮೇಲೆ ಕೈಹೊತ್ತು ದೊಡ್ಡದಾಗಿ ನಿಟ್ಟುಸಿರು ಬಿಟ್ಟೆ.

'ದೇವರೇ! ನಾವು ಕೆಟ್ಟದಾಗಿ ಸಿಕ್ಕಿಹಾಕಿಕೊಂಡು ಬಿಟ್ಟೆವಲ್ಲ?' ಸಣಕಲ ಲೊಚಗುಟ್ಟಿದ.

'ನಿನ್ನದು ಬಿಡಪ್ಪ. ನನ್ನದು ಹೇಳು.'

'ಅದೂ ಸರಿನೇ. ಗುರು, ಈಗ ಏನ್ಮಾಡಬೇಕೆಂದಿದ್ದೀಯ?'

'ನಾನೀಗ ನೇರವಾಗಿ ನನ್ನ ಲಾಯರನ ಬಳಿ ಹೋಗುತ್ತೇನೆ' ನಾನೆಂದೆ ಕಾರನ್ನು ಸ್ಟಾರ್ಟ್ ಮಾಡುತ್ತಾ.

'ಅವನ ಮಾತಿಗೆ ಅಷ್ಟೊಂದು ಪ್ರಾಮುಖ್ಯತೆ ಕೊಡಬೇಡ ಗುರುವೇ... ಅಂದ್ರೆ, ಜೈಲಿಗೆ ಹೋಗೋ ಬಗ್ಗೆ. ಇಂತಹ ಕ್ಷುಲ್ಲಕ ವಿಚಾರಗಳಿಗೆಲ್ಲಾ ಜೈಲಿಗೆ ಹಾಕುತ್ತಾರಾ? ಹೆಚ್ಚೆಂದರೆ ನಿನ್ನ ಲೈಸೆನ್ಸನ್ನು ಅಮಾನತ್ತಿಲ್ಲಿಡಬಹುದು.'

'ನನ್ನದು ಬಿಡು. ನೀನ್ಯಾಕೆ ಸುಳ್ಳು ಹೇಳಿದೆ?'

'ನಾನು ಸುಳ್ಳು ಹೇಳಿದೆನೇ? ಹಾಗೇಕೆ ಭಾವಿಸುತ್ತಿದ್ದೀಯ ಗುರೂ?'

'ನೀನು ಅವನ ಬಳಿ ನಿರುದ್ಯೋಗಿ ಅಂದೆ. ಆದರೆ ನನ್ನ ಬಳಿ ನನ್ನಂತೆಯೇ ನೀನೂ ಒಬ್ಬ ಸೃಜನಶೀಲ ಕಲಾವಿದ ಎಂದಿದ್ದೆ.'

'ನಿಜವಾಗಲೂ ನಾನೊಬ್ಬ ಸೃಜನಶೀಲ ಕಲಾವಿದನೇ. ಆದರೆ ಇವೆಲ್ಲಾ ಪೊಲೀಸರ ಮುಂದೆ ಹೇಳುವಂತದ್ದಲ್ಲ.' ಅವನು ಹೇಳಿದ.

'ಹಾಗಾದರೆ ನಿನ್ನ ವೃತ್ತಿಯಾದರೂ ಏನು?'

'ಹ್ಞೆ... ಹ್ಞೆ...' ಅವನು ತಡವರಿಸಿದ.

'ಹೇಳೋಕೆ ನಾಚಿಕೆಯಾಗುತ್ತಿದೆಯೇ?'

'ನಾಚಿಕೆ? ಛೆ! ನನ್ನ ವೃತ್ತಿಯ ಬಗ್ಗೆ ನನಗೆ ತುಂಬಾ ಅಭಿಮಾನವಿದೆ.'

'ಹಾಗಾದರೆ ಹೇಳೋಕ್ಕೇನು ಸಂಕೋಚ?'

'ನೀವು ಬರಹಗಾರರು ನಿಜವಾಗಲೂ ಬೆನ್ನು ಬಿಡುವುದಿಲ್ಲ!'

'ಖಂಡಿತವಾಗಿಯೂ ಇಲ್ಲ. ನನಗದರ ಅಗತ್ಯವೂ ಇಲ್ಲ.' ನಾನು ಸುಳ್ಳು ಹೇಳಿದೆ.

'ಖಂಡಿತವಾಗಿಯೂ ನಿನಗೆ ಬಹಳಷ್ಟು ಕುತೂಹಲವಿದೆ ಗುರು! ನಾನ್ಯಾವುದೋ ಒಂದು ವಿಶಿಷ್ಟ ವೃತ್ತಿಯಲ್ಲಿದ್ದೇನೆಂದು ನೀನು ಭಾವಿಸಿಕೊಂಡಿದ್ದೀಯ' ಅವನು ಕಡೆಗಣ್ಣಿನಿಂದ ನನ್ನನ್ನೇ ನೋಡಿದ.

ಅವನು ನನ್ನ ಯೋಚನೆಯನ್ನು ಗ್ರಹಿಸಿದ್ದು ನನಗೆ ಸರಿ ಬರಲಿಲ್ಲ. ನಾನು ಮಾತನಾಡದೆ ನನ್ನ ದೃಷ್ಟಿಯನ್ನು ರಸ್ತೆಯ ಮೇಲೆ ನೆಟ್ಟೆ.